130/2023-24
19/09/2023

# ಸಮಗ್ರಶಿಕ್ಷಣಕರ್ನಾಟಕ

ರಾಜ್ಯಯೋಜನಾ ನಿರ್ದೇಶಕರ ಕಛೇರಿ,.ಕೆ.ಆರ್.ವೃತ್ತ, ನೃಪತುಂಗರಸ್ತೆ, ಬೆಂಗಳೂರು-01

ಸಂಖ್ಯೆ: ಸಶಿಅ/ಆಚ/ಸ್ವಹ್ಯೆಸೇ ದಿ/2023-24 ದಿನಾಂಕ:16/09/2023

**ಸುತ್ತೋಲೆ**

ವಿಷಯ: ದಿನಾಂಕ: 15.09.2023 ರಿಂದ 02.10.2023 ರ ವರೆಗೆ"ಸ್ವಚ್ಛತಾ ಹೀ ಸೇವಾ" /ಸ್ವಚ್ಛತೆಯೇಸೇವೆ" ಆಂದೋಲನವನ್ನು ಹಮ್ಮಿಕೊಳ್ಳುವ ಬಗ್ಗೆ.

ಉಲ್ಲೇಖ :1.ಮಾನ್ಯ ಕಾರ್ಯದರ್ಶಿಗಳು, ಜಲಶಕ್ತಿ ಮಂತ್ರಾಲಯ ಹಾಗೂ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ ನವದೆಹಲಿ ಇವರ ಜಂಟಿ ಅ.ಸ.ಪ. ಸಂಖ್ಯೆ: S-13015/62/2023-SBM-VI-DDWS, ದಿನಾಂಕ: 04.09.2023.

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಪತ್ರ ಸಂಖ್ಯೆ: ಗ್ರಾಅಪ/ಪ್ರ. ಕಾ/ ಆಶಾ/2023 ಮತ್ತು ದಿನಾಂಕ: 14.09.2023

******

ಸ್ವಚ್ಛಭಾರತ್ ಮಿಷನ್ (ಗ್ರಾಮೀಣ) ಮತ್ತು ಸ್ವಚ್ಛಭಾರತ್ ಮಿಷನ್ (ನಗರ) ಯೋಜನೆಗಳಡಿ ದಿನಾಂಕ: 02.10. 2023 ರಂದು ಮಹಾತ್ಮ ಗಾಂಧೀಜಿಯವರ ಜನ್ಮ ದಿನದ ಸ್ಮರಣಾರ್ಥವಾಗಿ "ಸ್ವಚ್ಛಭಾರತ್ ದಿವಸ್ "ವನ್ನಾಗಿ ಆಚರಿಸಲಾಗುತ್ತಿದೆ. ಈ ಹಿನ್ನಲೆಯಲ್ಲಿ ದಿನಾಂಕ:15.09.2023 ರಿಂದ 02.10.2023 ರವರೆಗೆ 15 ದಿನಗಳ "ಸ್ವಚ್ಛತಾ ಹೀ ಸೇವಾ"/ ಸ್ವಚ್ಛತೆಯೇಸೇವೆ" ಎಂಬ ವಿಶೇಷ ಆಂದೋಲನವನ್ನು ಹಮ್ಮಿಕೊಳ್ಳಲು ಕೇಂದ್ರ ಸರ್ಕಾರವು ನಿರ್ದೇಶಿಸಿರುತ್ತದೆ.

ಈ ಆಂದೋಲನವನ್ನು ಯಶಸ್ವಿಯಾಗಿ ಆಯೋಜಿಸಲು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 15-09-2023 ರಂದು ನಡೆದ ಸಭೆಯಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳು ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಸೂಚಿಸಲಾಯಿತು. ಶಿಕ್ಷಣ ಇಲಾಖೆ ವತಿಯಿಂದ "ಸ್ವಚ್ಛತಾಹೀಸೇವಾ /ಸ್ವಚ್ಛತೆಯೇ ಸೇವೆ" ಕುರಿತು ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸೂಚಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಶಿಕ್ಷಕರು ಶಾಲಾ -ಕಾಲೇಜುಗಳ ಹಂತದಲ್ಲಿ ಕೆಳಕಂಡ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.

1. ಶಿಕ್ಷಕರು ವಿದ್ಯಾರ್ಥಿಗಳಿಗೆ "ಸ್ವಚ್ಛತಾ ಹೀ ಸೇವಾ /ಸ್ವಚ್ಛತೆಯೇ ಸೇವೆ" ( ಕಸ ಮುಕ್ತ ಭಾರತ) ಕುರಿತು ಚಿತ್ರಕಲೆ, ಚರ್ಚಾಸ್ಪರ್ಧೆ, ಘೋಷಣೆಗಳ ರಚನೆ, ರಸಪ್ರಶ್ನೆ ಹಾಗೂ ಪ್ರಬಂಧಸ್ಪರ್ಧೆಗಳನ್ನು ಹಮ್ಮಿಕೊಳ್ಳುವುದು.
2. ವಿದ್ಯಾರ್ಥಿಗಳಿಂದ ಶಾಲಾ -ಕಾಲೇಜುಗಳ ಸುತ್ತಲಿನ ಪರಿಸರದಲ್ಲಿ ಸಸ್ಯಗಳನ್ನು ನೆಡುವುದು.
3. ಶಾಲಾ- ಕಾಲೇಜುಗಳಲ್ಲಿ"ನೈರ್ಮಲ್ಯ ಕ್ಲಬ್"ಸ್ಥಾಪಿಸಿ, ವಿದ್ಯಾರ್ಥಿಗಳಿಗೆ ವೈಯಕ್ತಿಕ ಸ್ವಚ್ಛತೆ ಹಾಗೂ ತ್ಯಾಜ್ಯಗಳನ್ನು ಸಮರ್ಪಕವಾಗಿ ವಿಲೇವಾರಿ ಮಾಡುವುದರ ಮಹತ್ವವನ್ನು ತಿಳಿಸುವುದು.
4. ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ನನ್ನ ಶಾಲೆ , ಸಮುದಾಯ ಹಾಗೂ ಮನೆಯನ್ನು ಸ್ವಚ್ಛವಾಗಿಟ್ಟು ಕೊಳ್ಳುವಂತೆ ಹೇಳಿಕೆಯೊಂದಿಗೆ ಪ್ರತಿಜ್ಞೆ ಮಾಡುವುದು.

5. ಶಿಕ್ಷಕರು ವಿದ್ಯಾರ್ಥಿಗಳಿಗೆ ನೀರಿನ ಮಿತ ಬಳಕೆ ಹಾಗೂ ನೀರಿನ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸುವುದು.
6. ವಿದ್ಯಾರ್ಥಿಗಳ ಮೂಲಕ "ಸ್ವಚ್ಛತಾ ಡ್ರೈವ್ "ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.
7. ಶಿಕ್ಷಕರು ವಿದ್ಯಾರ್ಥಿಗಳಿಗೆ ಅನುಪಯುಕ್ತ ವಸ್ತುಗಳನ್ನು ಮರುಬಳಕೆಯ ಬಗ್ಗೆ ಅಭ್ಯಾಸ ಮಾಡಿಸುವುದು.

ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು(ಆಡಳಿತ) ರವರು ಶಾಲಾ -ಕಾಲೇಜುಗಳಲ್ಲಿ ಶಿಕ್ಷಕರು ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕ್ರಮ ವಹಿಸುವುದು ಹಾಗೂ ಅನುಷ್ಠಾನಗೊಳಿಸಿದ ಬಗ್ಗೆ ಮಾಹಿತಿಯನ್ನು ರಾಜ್ಯ ಕಛೇರಿಗೆ ಸಲ್ಲಿಸುವುದು.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು

**ಅಗತ್ಯ ಕ್ರಮಕ್ಕಾಗಿ:**

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಮತ್ತು ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ ರವರ ಮೂಲಕ ಕ್ಷೇತ್ರ ಶಿಕ್ಷಣಾಧಿಕಾರಿರವರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಶಾಲಾ ಮುಖ್ಯ ಶಿಕ್ಷಕರಿಗೆ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ.
3. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು , ಪದವಿ ಪೂರ್ವ ಶಿಕ್ಷಣ ಇಲಾಖೆ ರವರ ಮೂಲಕ ಪ್ರಾಂಶುಪಾಲರಿಗೆ.

**ಮಾಹಿತಿಗಾಗಿ:**

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01
2. ಮಾನ್ಯ ಆಯುಕ್ತರು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು - 01.
3. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ ಆರ್ ಸರ್ಕಲ್, ಬೆಂಗಳೂರು - 01
4. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಹಾಗೂ ಕಲ್ಬುರ್ಗಿ ವಿಭಾಗ
5. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.
6. ಕಛೇರಿ ಪ್ರತಿ,